# ಕನ್ನಡ ಕಾವ್ಯಕ್ಕೆ ಬಂಜಗೆರೆ ಜಯಪ್ರಕಾಶರವರ ಕೊಡುಗೆ

## ನಾಗೇಂದ್ರಪ್ಪ ಶಿವಶರಣಪ್ಪ

ಅಥಿತಿ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಹುಲಸೂರು, ಬೀದರ.

**Received: 26/10/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289922**

## ABSTRACT:

ಬಂಜಗೆರೆ ಜಯಪ್ರಕಾಶರವರು ಕರ್ನಾಟಕದ ಪ್ರಮುಖ ಕವಿಗಳಲ್ಲಿ ಒಬ್ಬರು. ಅವರೇ ಹೇಳಿದಾಗೆ ಬಿ.ಎ. ತರಗತಿಯಿಂದಲೇ ಕಾವ್ಯ ಕ್ಷೇತ್ರದಲ್ಲಿ ಕಾವ್ಯಾಸಕ್ತಿ ಬೆಳೆಸಿಕೊಂಡವರು. ತಾವು ಕವಿತೆ ಬರೆಯುತ್ತ ಇನ್ನೊಬ್ಬರನ್ನು ಬರೆಯುವುದಕ್ಕೆ ಪ್ರೇರಣೆ ನೀಡಿದ ಕವಿ. ಕನ್ನಡ ಸಾಹಿತ್ಯದ ಸಾರಸ್ವತ ಲೋಕದಲ್ಲಿ ಅನೇಕ ಕವಿಗಳು ಆಯಾ ಕಾಲಘಟ್ಟದಲ್ಲಿ ಕಾವ್ಯಗಳ ಮೂಲಕ ಹೆಸರುವಾಸಿಯಾಗಿದ್ದರೆ. ಎಪ್ಪತ್ತರ ದಶಕದ ಕಾಲಘಟ್ಟದ ವಸ್ತುವಿನ ನಿರ್ಮಾಣದಲ್ಲಿ ಸ್ವತಂತ್ರವಾದ ಚಿಂತನೆಗಳು ವಾಸ್ತವ ನೆಲೆಯಲ್ಲಿ ಜೀವದ್ಧನಿಯಾಗಿ ಮಿಡಿದಿರುವುದು ಕಾಣುತ್ತೇವೆ. ಈ ಮಿಡಿಯುವಿಕೆಯಲ್ಲಿ ಸಾಮಾಜಿಕ ನ್ಯಾಯದ ಭಾವನೆಗಳನ್ನು ಹೊರಹಾಕಲು ಪರಿಪಕ್ವತೆಯ ಕಾಲವೆಂದು ಗಮನಿಸುವ ಅಗತ್ಯತೆಯಿದೆ. ಒಬ್ಬ ಕವಿ ಅಥವಾ ಲೇಖಕ ತನ್ನ ಬದುಕಿನ ಮೈಲುಗಲ್ಲುಗಳನ್ನು ದಾಟಬೇಕಾದರೆ ಆತನಿಗೆ ತಾನು ತಲುಪಬೇಕಾದ ಮಾರ್ಗದ ಕಡೆ ಪ್ರಯಾಣಿಸುವ ಕಾರ್ಯದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿರುತ್ತಾನೆ. ಈ ಹಿನ್ನೆಲೆಯಲ್ಲಿ ಬಂಜಗೆರೆ ಜಯಪ್ರಕಾಶರವರು ದಲಿತ–ಬಂಡಾಯ ಸಾಹಿತ್ಯ ಘಟ್ಟದ, ಅದಕ್ಕೆ ಸ್ಪಂದಿಸುವ ನೆಲೆಯಲ್ಲಿ ತಮ್ಮದೆಯಾದ ವಿಚಾರಗಳ ಮೂಲಕ ಬೆಳಕು ಚೆಲ್ಲಿದ್ದಾರೆ. ಸೂಕ್ಷ್ಮ ಸಂವೇದನೆ ಮತ್ತು ರೂಪಕ ಸಂಕೇತಗಳ ಮೂಲಕ ಮಾತನಾಡಬಲ್ಲ ವೈಚಾರಿಕ ಕವಿಗಳ ಸಾಲಿನಲ್ಲಿ, ಬಂಜಗೆರೆ ಜಯಪ್ರಕಾಶರು ಪ್ರಮುಖರಾಗಿ ಕಾಣುತ್ತಾರೆ. ಇವರ ಕಾವ್ಯಗಳು ದಲಿತ ಅಥವಾ ಜನಸಾಮಾನ್ಯರ ನೋವು, ಬಡತನ, ಹಸಿವು, ಶೋಷಣೆ, ಕ್ಷಾಮ, ಬರಗಾಲ, ಮೋಸ, ವಂಚನೆ, ಪರ್ಯಾಯ ವಿಚಾರಗಳು ಜನಸಾಮಾನ್ಯರಿಗೆ ಹತ್ತಿರವಾಗುವ ಧ್ವನಿಯ ಮೂಲಕ ಎಳೆ ಎಳೆಯಾಗಿ ಬಿಚ್ಚಿಡುವ ಸಂದರ್ಭ, ಬಳಸುವ ಶೈಲಿ, ನಿರೂಪಣ ಕ್ರಮ, ವಸ್ತು ಆಯ್ಕೆಯ ವಿಧಾನ, ತಂತ್ರಗಾರಿಕೆ ವಿಶಿಷ್ಟತೆಯಿಂದ ಕೂಡಿದ್ದಾಗಿದೆ. ಅಂತೆಯೇ ಸಂಕೀರ್ಣತೆಯ ಅನೇಕ ಸಂಗತಿಗಳನ್ನು ಸಹೃದಯರಿಗೆ ನೀಡುವ ಕುಶಲತೆ ಎದ್ದು ಕಾಣುತ್ತದೆ.

## KEYWORDS:

ನೋವು, ಬಡತನ, ಹಸಿವು, ಶೋಷಣೆ, ಮೋಸ, ವಂಚನೆ.

ಒಬ್ಬ ಕವಿ ಮೈಯಲ್ಲಾ ಕಿವಿಯ ಹೊಂದಿರುತ್ತಾನೆ. ಅಂದರೆ ತನ್ನ ಭಾವನೆಗಳನ್ನು ಹೊರಹಾಕುವಾಗ ಕವಿ ತಾಳುವ ನಿಲುವು, ಆತನಿಗಷ್ಟೆ ಸೀಮಿತವಾಗದೆ, ತಾನು ಬಾಳಿ–ಬದುಕಿದ ಸಮಾಜದ ವ್ಯವಸ್ಥೆಯ ನಿರೀಕ್ಷೆಯ ಸಮರ್ಥನೆ ಮತ್ತು ಅಂತಹ ಕಳಕಳಿಗೆ ಕಾವ್ಯದ ಮೂಲಕ ಸೂಕ್ಷ್ಮವಾದ ಬೆಳುಕು ಚೆಲ್ಲುವುದಾಗಿರುತ್ತದೆ. ಮೂಲತಹಃ ಹಿಂದುಳಿದ ಬುಡಕಟ್ಟು ಜಾತಿಯ ರೈತಾಪಿ ಕುಟುಂಬದಿಂದ ಬಂದ ಇವರು, ಇವರ ಕಾವ್ಯದ ಹರಹು ದೊಡ್ಡದು. ಅನ್ನವಿಲ್ಲದವನು, ನೆಲೆಯಿಲ್ಲದವರು, ನಡಬಗ್ಗಿಸಿ ನಾಟಿಮಾಡುವವರ ನರಳುವಿಕೆಯ ಕೊರಳಧ್ವನಿಯನ್ನು ಅನಾವರಣಗೊಳಿಸಿದ್ದಾರೆ. ಇತರ ಕವಿಗಳಿಗಿಂತ ಸೂಕ್ಷ್ಮ ಹಾಗೂ ರೂಪಕ ಸಂಕೇತಗಳಿಂದ ಭಿನ್ನವೆನಿಸಿಕೊಳ್ಳುತ್ತಾರೆ. ಅಸ್ಪೃಶ್ಯತೆ, ಶೋಷಣೆ, ಧಾರ್ಮಿಕ ಕಂದಾಚಾರ, ಸಂಪ್ರದಾಯ ಮತೀಯವಾದ, ಆಡಂಬರದ ಜೀವನ, ಜನಸಾಮಾನ್ಯರು ಇವತ್ತಿಗೂ ಆಚರಿಸಿಕೊಂಡು ಬರುತ್ತಿರುವ ಅನಿಷ್ಟ ಪದ್ಧತಿಗಳು, ಆಚರಣೆಗಳು ಮತ್ತು ಸೀಮಾತೀತವಾಗಿ ಯಾವುದೇ ಮೂಲೆಯ ದೂರದ ಸುದ್ದಿ ತುಣುಕುಗಳು ತಮ್ಮ ಕಾವ್ಯದ ವಸ್ತುವಾಗಿ ತೀವ್ರವಾದ ಸಂಚಲನವನ್ನುಂಟು ಮಾಡುತ್ತಾರೆ.

'ಕಲಾವಿದನೊಬ್ಬ ತನ್ನ ಕಾಲದ ಕಿವಿ, ಕಣ್ಣು ಮತ್ತು ಧನಿಯಾಗಬೇಕು' ಎಂದು ಹೇಳಿದ ಮಾಕ್ಸಿಂಗಾರ್ಕಿಯ ಆಶಯದಂತೆ ಬಂಜಗೆರೆಯವರು ಒಬ್ಬ ಕವಿಯೂ ಹೌದು. ಲೇಖಕ ಅನುವಾದಕ, ಸಂಶೋಧಕ ಪ್ರಮುಖವಾಗಿ ಒಬ್ಬ ಸಾಂಸ್ಕೃತಿಕ ಚಿಂತಕ ಮತ್ತು ಸೃಜನೇತರ ಸಾಹಿತ್ಯದಲ್ಲೂ ಸಹ ತಮ್ಮದೆಯಾದ ಸೈದ್ಧಾಂತಿಕ ನೆಲೆಯಲ್ಲಿ ಮಹತ್ವದ ಕಾರ್ಯ ಮಾಡಿದ್ದಾರೆ. ಕವಿಯಾಗಿ ತಾನಂದುಕೊಂಡ ಮತ್ತು ಭವಿಷ್ಯತ್ತಿಗೆ ಬೇಕಾದ ಅನೇಕ ಸಂಗತಿಗಳು ತಮ್ಮ ಕಾವ್ಯದಲ್ಲಿ ಹೊಸ ಹೊಸ ಆಶಯಗಳ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ. ಜನಸಾಮಾನ್ಯರ ಅಥವಾ ದಲಿತರ ಜೀವನ ವಿಧಾನ, ಅವರ ಸಂಸ್ಕೃತಿ, ಸಾಮಾಜಿಕ ಸ್ಥಿತಿಗತಿ, ಬಡತನ ಇನ್ನೂ ಅನೇಕ ಆಲೋಚನೆಗಳು ಒಂದೆಡೆಯಾದರೆ, ಮತ್ತೊಂದಡೆ ಕವಿಯ ಜೀವನ, ಕೌಟುಂಬಿಕ ಪರಿಸರ, ವೃತಿ ಪ್ರವೃತ್ತಿಯಲ್ಲಿ ಆದ ಅನುಭವಗಳು ಮತ್ತೊಂದು ರೀತಿಯ ಅಂಶಗಳನ್ನು ಅಭಿವ್ಯಕ್ತಿಸುತ್ತವೆ.

'ಅತ್ಯುನ್ನತ ಕವಿಯೊಬ್ಬ ತನ್ನೊಳಗೆ ಬರೆಯುತ್ತಲೇ ತನ್ನ ಕಾಲವನ್ನು ಬರೆಯುತ್ತಾನೆ' ಎನ್ನುವುದು ಎಲಿಯಟನ್ ಮಾತು. ಈ ಮಾತಿನ ಹಾಗೆ ಕವಿಯ ಕನಸುಗಳು, ಯೋಚನೆಗಳಿಗಾಗಿ, ಯೋಚನೆಗಳು ಕಾರ್ಯಗತಗೊಂಡು ಸಾಧಿಸುವ ಸಾಧನೆ ಯಶಸ್ವಿನ ಪ್ರಭಾವವೆಂಬತೆ ಈ ಕವಿಯ ಒಟ್ಟಾರೆ ಸಾಹಿತ್ಯ ಸೃಷ್ಟಿಯ ಆಳ ಆಗಲದ ರೂಪರೇಷ ತಾತ್ವಿಕ ಸಿದ್ಧಾಂತಗಳ ಸೈದ್ಧಾಂತಿಕ ನೆಲೆಗಳು ಕನ್ನಡ ಸಾಹಿತ್ಯಕ್ಕೆ ಅಥಾವ ಕನ್ನಡ ಕಾವ್ಯ ಲೋಕಕ್ಕೆ ಅವರು ನೀಡಿದ ಕೊಡುಗೆ ಅಪಾರವಾದುದು.

ಕಾವ್ಯ ಕವಿ ಪ್ರತಿಭೆಯ ನಿರ್ಮಾಣಕ್ರಿಯೆ. ಅಂದರೆ ಆತನಿಗೆ ದತ್ತವಾದ ಭಾವಾನುಭವಗಳನ್ನು ಕಾವ್ಯದ ಮೂಲಕ ಹೊರ ಹಾಕುತ್ತಾನೆ. ಕಾವ್ಯ ಮತ್ತು ಸಾಹಿತ್ಯ ಮೂಲತಃ ಒಂದು ಅನುಕರಣೆ ಎಂಬ ವಾದವನ್ನು ಮುಂದಿಟ್ಟವರು ಪ್ಲೇಟೋ, ಬಂಜಗೆರೆ ಜಯಪ್ರಕಾಶ ಅವರ “ಕವಿತೆ ನನ್ನನ್ನು ಆಪ್ತ ಸಂವೇದನೆಯಾಗಿ ನನ್ನೊಳಗಿನ ಅನಿಸಿಕೆಗಳಿಗೆ ಮಾತಿನ ಅಂಗಿ ತೊಡಗಿಸಲು ಪ್ರಯತ್ನಿಸಿದಾಗ ಮಾತ್ರ ಅದರೊಳಗೊಂದು ಮಾನವ ಹೃದಯ ಉಸಿರಾಡುತ್ತಿರುತ್ತದೆ. ಅದು ಆಕಸ್ಮಾತ್ ಅ ತಾರ್ಕಿಕವಾದುದಾಗಿರಲಿ, ಶಾಸ್ತ್ರೀಯ ಸಿದ್ಧಾಂತಗಳ ಚೌಕಟ್ಟಿಗೆ ಹೊಂದದಂತಿರಲಿ, ಆದರೆ ಒಂದು ಸನ್ನಿವೇಶದೊಳಗೆ ಜೀವಿಸಿದ್ದ ಮನುಷ್ಯನೊಬ್ಬನ ಅಪ್ಪಟ ಅನಿಸಿಕೆಯಾಗಿರುತ್ತದೆ. ಈ ನೆಲೆಯಿಂದಲೇ ಇವರ ಕಾವ್ಯ ಪ್ರಮುಖ ಸ್ಥಾನವನ್ನು ಪಡೆದುಕೊಂಡು ವಿದ್ವಾಂಸರ ಅಭಿಪ್ರಾಯಗಳಿಂದ ಕಂಗೊಳಿಸುತ್ತದೆ. ಕಾವ್ಯದ ಮೂಲಕ ಸಾಹಿತ್ಯವನ್ನು ಪ್ರವೇಶಿಸಿದ ಬಂಜಗೆರೆ ಜಯಪ್ರಕಾಶ ಅವರು ಮೌಲಿಕವಾದ ‘ಪಾದಾರ್ಪಣ’ ೧೯೮೩, ‘ಮಹೂವಾ’೧೯೯೨, ‘ನಾಳೆಗಾದರೂ ಸಿಗದೆ ನಿನ್ನ ತಾವಿನ ಗುರುತು’೧೯೯೮, ‘ಕಳೆದ ಕಾಲದ ಪ್ರೇಯಸಿಯರಿಗೆ’ ೨೦೦೪ ರಲ್ಲಿ ನಾಲ್ಕು ಕವನ ಸಂಕಲನಗಳು ಪ್ರಕಟಿಸಿದ್ದಾರೆ.

ಇವರನ್ನು “ಹತ್ತಿರದಿಂದ ಬಲ್ಲವರಿಗೆ ಅವರ ಎಡಪಂಥಿಯ ನಿಲುವಿನ ಬಗ್ಗೆ ಹಾಗೂ ಅವರು ತೊಡಗಿಸಿಕೊಂಡಿದ್ದ ಚಳುವಳಿ ಹೋರಾಟಗಳ ಬಗ್ಗೆ ತಿಳಿದಿರುತ್ತದೆ. ಹೀಗಾಗಿ ಅವರನ್ನು ಹೋರಾಟಗಾರರೆಂದು ಲೇಬಲ್ಲು ಹಚ್ಚಿ ನೋಡುವುದು ಸುಲಭ. ಕವಿಯಾಗಿ ಅವರು ಪ್ರವರ್ಧಮಾನಕ್ಕೆ ಬಂದಾಗ ‘ಬಂಡಾಯ ಕವಿ’ ಎಂದು ಕೆಲವರು ಗುರುತಿಸುವುದುಂಟು. ಆದರೆ ವಾದಕ್ಕೆ ಬದ್ಧರಾಗಿ ಜೆ.ಪಿ. ಕಾವ್ಯ ಬರೆಯುತ್ತಿದ್ದಾರೆ. ಅದು ಅಷ್ಟಾಗಿ ಗಮನ ಸೆಳೆಯುತ್ತಿರಲಿಲ್ಲವೇನೋ. ರಕ್ತಸಿಕ್ತ ಕ್ರಾಂತಿ ಕವಿಯ ವೇಷ ಧರಿಸುವುದು ಜೆ.ಪಿ. ಅವರಿಗೆ ಸುಲಭವಾಗಿದ್ದಾಗ, ಅವರೇಕೆ ರಮ್ಯವಾಗಿ ಕಳೆದ ಕಾಲದ ಪ್ರೇಯಸಿಯರಿಗೆ ಭಿನ್ನವಿಸಿಕೊಳ್ಳುತ್ತಾರೆ? ಇದು ಕೂತೂಹಲ ಹುಟ್ಟಿಸುವ ಪ್ರಶ್ನೆಯಾಗಿದೆ” ಇವರ ಕಾವ್ಯ ಸಾಹಿತ್ಯವನ್ನು ಅವಲೋಕಿಸಿದಾಗ ಕಾವ್ಯದ ಮೂಲಕ ಚಿಂತನಾ ಮಾರ್ಗಕ್ಕೆ ಹೆಚ್ಚಿನ ಮಹತ್ವ ಕಲ್ಪಸಿದ್ದು ಕಂಡುಬರುತ್ತದೆ.
‘ನೊಂದವರ ನೋವು ನೋಯದವರೆತ್ತ ಬಲ್ಲರು’ ಎಂಬ ಅಕ್ಕಮಹಾದೇವಿಯ ವಚನದ ಸಾಲಿನಂತೆ ಸ್ವತಃ ತಾವು ಅನುಭವಿಸಿದಾಗ ಮಾತ್ರ ಆ ಅನುಭವ ಹೇಳಲು ಸಾಧ್ಯವಾಗುತ್ತದೆ. ಆದರೆ ಇಲ್ಲಿ ತಾನು ಬಂದ ಕಡೆ ಅಷ್ಟು ಕಠೋರವಾದ ದುಃಖ ದುಮ್ಮನಗಳನ್ನು ಅನುಭವಿಸದೇ ಇದ್ದರೂ ಅದನ್ನು ನೋಡುವ ದೃಷ್ಟಿಕೋನ, ಆ ಮನದಾಳದ ಭಾವನೆ, ಕಾವ್ಯದ ಮೂಲಕ ಹೊರಹಾಕಿರುವುದು ಸಜ್ಜನಿಕೆ ಮತ್ತು ಸೃಜನಶಿಲತೆ ಪಕ್ವಗೊಳ್ಳುತ್ತಿರುವ ಕಾಲವೆಂದು ಹೇಳಬಹುದು.

ಬಂಜಗೆರೆಯವರು ಒಟ್ಟು ನಾಲ್ಕು ಕವನಗಳು ಸೇರಿ “ಬಂಜಗೆರೆ ಈವರೆಗಿನ

ಕವಿತೆಗಳು'' ಎಂಬ ಕವನ ಸಂಕಲನವನ್ನು ರಚಿಸಿದ್ದಾರೆ. ಪ್ರಾರಂಭದ ಕವಿತೆ 'ಟಿಪ್ಪು' ಕವಿತೆಯೇ ಕವಿಯು ಇತಿಹಾಸವನ್ನು ವರ್ತಮಾನಕ್ಕೆ ಪರಿಚಯಿಸುವ ಮತ್ತು ಚಿಂತಕರ ಚಾವಡಿಯಲ್ಲಿ ಚಿಂತನೆಗೆ ಒಳಪಡಿಸುವ ಮನೋಧರ್ಮದ ಹಿನ್ನೆಲೆಯಲ್ಲಿ ಈ ಲೋಕವನ್ನು ಗ್ರಹಿಸುವ ರೀತಿಯೇನಿದೆಯಲ್ಲಾ ಅದು ಬುದ್ಧಿ ಪ್ರಧಾನವಾದುದು. ಕವಿಯು ತನ್ನ ಎದೆಯಾಳದ ಅಳಲು ವೈಚಾರಿಕ ಮನಗೋಲಿನಲ್ಲಿ ಬದುಕುವ ಜನರನ್ನು ಯಥಾವತ್ತಾಗಿ ಚಿತ್ರಿಸುವ ಹಾಗೆ ಇಲ್ಲಿರುವ ಪ್ರತಿಯೊಂದು ಕವನಗಳು ಧ್ವನಿಸುತ್ತವೆ. ಅವರು ಚರಿತ್ರೆಯ ಅನುಭವಗಳನ್ನು ತಮ್ಮ ದಕ್ಕಿದ ವಿಷಯ ವಸ್ತುವನ್ನು ಹೀಗೆ ಹೇಳುತ್ತಾರೆ.

**''ಬಣ್ಣದ ಬಟ್ಟೆಗಳ ಬೆಂಗಳೂರು**
**ಅಬ್ಬರದ ಕಡಿಲಿಗೆ ನಾವೆಗಳಟ್ಟುತ್ತಿದ್ದ ಮಂಗಳೂರು**
**ಕಾಳು ಮೆಣಸಿನ ಬಿದನೂರು**
**ಗದ್ದೆ ಬಯಲಿನ ಪಟ್ಟಣ, ಮೈಸೂರು**
**ಮೈಮುರಿದ ಜನ ಕಟ್ಟುತ್ತಿರುವಾಗ ಹೊರೆ ವಿಶ್ರಾಂತಿಗೆ**
**ಸಂಜೆ ಹೊಂಬಣ್ಣದ ಲೇಪನ ನೇಸರಿಗೆ**
**ಕಾಳ ಕತ್ತಲೆಯ ತಾಲೀಮು ಅದರ ಹಿನ್ನೆಲೆಗೆ**
**ಪೂರ್ವದ ಸೂರ್ಯನಾಗಲೇ ಉರುಳುತ್ತಿದ್ದ**
**ಪಶ್ಚಿಮದ ಕಡಲಿಗೆ''**

ಟಿಪ್ಪು ಚರಿತ್ರೆಯಲ್ಲಿ ವಸಾಹತುಶಾಹಿಯ ವಿರುದ್ಧ ಸೆಣಸಿದವನು. ಮಂಡೇಲ ಅವನ ಮುಂದುವರೆದ ಭಾಗ. ಅನೇಕರ ಪ್ರಭುತ್ವದ ವಿರುದ್ಧ ಹೋರಾಟ ಮಾಡಿದವರು. ಇವರೆಲ್ಲ ತಳಸಮುದಾಯದ ಪ್ರತಿನಿದಿಗಳು. ಇವರೆಲ್ಲರ ಹೋರಾಟಗಳನ್ನು ಕಾವ್ಯದ ಮೂಲಕ ದಾಖಲಿಸುವುದರೊಂದಿಗೆ ಒಟ್ಟು ದಮನಿತರನ್ನೆಲ್ಲ ಒಂದು ನೆಲೆಯಲ್ಲಿ ಚಿತ್ರಿಸುವುದು ಬಂಜಗೆರೆ ಕಾವ್ಯದ ಮುಖ್ಯ ಆಶಯವಾಗಿದೆ. ಕವಿಗೆ ತನ್ನ ತಲ್ಲಣ ವಿದ್ವಲತೆಗಳನ್ನು ಕೇಳುವ ಕಿವಿಗಳು ಬೇಕು. ಎಷ್ಟೋ ವೇಳೆ ತಾನೂ ಬೇಡುವ ತನ್ನ ಕಲ್ಪನೆಯ ಮಿತ್ರರು ಸಿಗದೇ ಇದ್ದಾಗ ಕವಿ ತನ್ನನ್ನೇ ಎರಡಾಗಿ ಸೀಳಿಕೊಳ್ಳುತ್ತಾನೆ. ಒಂದು ಕಡೆ ತಾನಾಗಿಯೂ ಇನ್ನೊಂದು ಕಡೆ ಕವಿತೆಯಾಗಿಯೂ ತಾನೆ ನಿಂತು ಸಂಭಾಷಿಸುತ್ತಾನೆ. ಕಾವ್ಯವನ್ನು ಪ್ರಜ್ಞಾಪೂರಕವಾಗಿ ತೆಗೆದುಕೊಂಡ ಎಲ್ಲ ಕವಿಗಳ ವಿಚಾರದಲ್ಲಿ ಇದು ನಿಜವಾಗಿದೆ ಮತ್ತು ಸಹಜವೂ. ಬಂಜಗೆರೆಯಲ್ಲಿ ಇದೆಲ್ಲ ಆಗಿರುವಂತೆ ಕಾಣುತ್ತದೆ. ''ಬಂಜಗೆರೆ ಈವರೆಗಿನ ಕವಿತೆಗಳು'' ಸಂಕಲನದಲ್ಲಂತು ಅನೇಕ ಪುರಾವೆಗಳು ಸಿಗುತ್ತವೆ.

ವರ್ತಮಾನದ ತಲ್ಲಣಗಳು ಬಂಜಗೆರೆಯವರ ಕಾವ್ಯದ ಒಂದು ಮುಖ್ಯ ವಲಯ. ತಾವು ನಿಂತ ವರ್ತಮಾನದ ಅನೇಕ ತಲ್ಲಣಗಳು ಕುರಿತು ಇವರ

ಕವಿತೆಗಳಲ್ಲಿ ನಿರಂತರವಾದ ಚಿತ್ರಣಗಳು ಕಾಣುತ್ತವೆ.

**“ಮೇರೆಯರಿಯದೆ ಸೀಮೆಯರಿಯದೆ**
**ಜೀವಕಾರುಣ್ಯದ ಕಾನನಗಳಲ್ಲೂ**
**ಝೇಂಕರಿಸಿ ಶಸ್ತ್ರಗಳು**
**ಬಳಿದು ನೆತ್ತರು ಭೂಮಿಯೊಡಲು**
**ನವ್ಯವೆಲ್ಲಾ ಮೊಳಗಿ ಆಕ್ರಂದನ**
**ಶಾಸವಂಟದೇ ಭೂಪತಿಯ ಬೆನ್ನಿಗೆ**
**ಕಾದು ನಿಂತಿದೆಯದು ಕಾಲಗತಿ ಕರೆಗೆ**

**“ಮೊಳೆತ ಮೇಲೆ ಶಿಖರ**
**ಬೆಳೆದು ಅಗಸದೆಡೆಗೆ ಗೋಪೊರ**
**ಬೇರುಗಳಿಲ್ಲದ ಅಹಂಕಾರ**
**ಹೃತ್ಕೇಂದದೊಳಗೆಲ್ಲೋ ಭೂಕಂಪ**
**ಮರಣ ಕೈ ಬೀಸಿತ್ತೇ ವನಿತೆಯರಸ”**

ಈ ಕವಿತೆ ಕೆಳಗಡೆ ಬಂಜಗೆರೆಯವರು ಹೇಳಿದ ಹಾಗೆ, “ಇಸ್ಲಾಂ ಜಗತ್ತಿನ ಜೊತೆ ಅಮೇರಿಕಾದ ದುರ್ವ್ಯವಹಾರ ಹಾಗೂ ನಂತರ ಸೆಪ್ಟೆಂಬರ್ ೧೧ರಂದು ನಡೆದ ವಿಶ್ವ ವಾಣಿಜ್ಯ ಕೇಂದ್ರದ ಮೇಲಿನ ತಾಲಿಬಾನ್ ದಾಳಿ” ಕುರಿತು ಈ ಮೇಲಿನ ಕವಿತೆ ರಚನೆಗೊಂಡಿದೆ. ವರ್ತಮಾನದ ವರ್ತನೆಗಳನ್ನು ಕಂಡು ಹೇಸುವುದು, ಅಂತಕರಣದಿಂದ ಮಿಡಿಯುವುದು ಕವಿಯ ಸ್ವಭಾವ ಮತ್ತು ಅದು ಅವರಿಗೆ ರಕ್ತಗತವಾಗಿ ಬಂದುದು.

ಬುದ್ಧ, ಟಿಪ್ಪು, ಮಂಡೇಲಾ, ಗಾಂಧಿ, ಶಂಕರಗುಹಾ ಹೀಗೆ ಬಂಜಗೆರೆ ಹಲವು ವ್ಯಕ್ತಿಗಳ ಬಗ್ಗೆ ಕವಿತೆಗಳನ್ನು ಬರೆದಿದ್ದಾರೆ. ತಮ್ಮ ಗ್ರಹಿಕೆ ದೃಷ್ಟಿಗೆ ದಕ್ಕಿದಂತೆ ಇಲ್ಲಿನ ವ್ಯಕ್ತಿತ್ವ ಚಿತ್ರಣಗಳಿವೆ. ಮಾದರಿ ವ್ಯಕ್ತಿ, ಸಮಾಜ ಮತ್ತು ತಾನು ಹೀಗೆ ತುಲನೆಯಲ್ಲಿ ಇಲ್ಲಿನ ವ್ಯಕ್ತಿಕೇಂದ್ರಿತ ಕವಿತೆಗಳಿವೆ.

‘ಬುದ್ಧ ಮಾರ್ಗವನ್ನು ನಂಬುವ ಕವಿ ಎಡಪಂಥಿಯ ಚಿಂತನೆಯಲ್ಲಿ ಪ್ರಧಾನವಾಗಿರುವ ಹಿಂಸೆಯಲ್ಲಿ ನಂಬಿಕೆಯಿಡುವುದು ಸಾಧ್ಯವಿಲ್ಲ. ಹೋರಾಟದ ಅಂತಃಸತ್ವವವುಳ್ಳ ಕವಿತೆಗಳನ್ನು ಬರೆದರೂ ಅವು ಮೂಲಭೂತವಾಗಿ ಹಿಂಸೆಯನ್ನು ಪ್ರತಿಪಾದಿಸುವುದಿಲ್ಲ. ಪ್ರಭುತ್ವ ವಿರೋಧಿ ಧೋರಣೆಗಳು ಹಿಂಸೆಯಿಂದ ಕೊನೆಗಾಣುವುದು ಸಾಧ್ಯವಿಲ್ಲವೆಂಬ ನಿಲುವು ಇಲ್ಲಿ ರೂಪುಗೊಳ್ಳುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಬಂಜಗೆರೆಯವರ ಕಾವ್ಯವು ಹಿಂಸಾತ್ಮಕ ಕ್ರಮಗಳಿಂದ ಬುದ್ಧನ

ಮೈತ್ರಿ ಕರುಣೆಗಳ ಕ್ರಮಗಳೇ ಒಳ್ಳೆಯದೆಂಬ ನಿಲುವನ್ನು ವ್ಯಕ್ತಪಡಿಸುತ್ತದೆ.

**“ಶಾಕ್ಯರು ಕೊಲಿಯರು ದಾಯಾದಿಗಳು**
**ರೋಹಿಣೀ ಪಾಲಿಗೆ ಜಗಳವಾಡುವರು**
**ರಕ್ತ ಸಂಬಂಧಿಗಳು ಆಕ್ಯರು ಕೊಲಿಯರು**
**ರೋಹಿಣಿಯಂತೆ ಬುದ್ಧನಿಗೂ ಸಮಬಂಧುಗಳು”**

ಈ ಸಾಲುವ ಕಟ್ಟುವ ಕ್ರಿಯೆ ರಚನಾತ್ಮಕವಾದುದು. ಇದಕ್ಕಾಗಿ ಈ ಕಟ್ಟುವಿಕೆಯ ಕ್ರಿಯೆ ವಿಶಾಲಾರ್ಥದಲ್ಲಿ ಸಾಧಿತವಾಗುತ್ತದೆ. ಈ ಸಂಧಿಗ್ದವನ್ನು ಎದುರಿಸುವುದು ಕಾವ್ಯದಿಂದ ಮಾತ್ರ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ಕವನಗಳನ್ನು ಅವಲೋಕಿಸಿದಾಗ ಖ್ಯಾತ ಕವಿ ವಿಮರ್ಶಕರು ಎಚ್, ಎಸ್. ರಾಘವೇಂದ್ರರಾವ್ ಅವರು ಬಂಜಗೆರೆ ಕಾವ್ಯ ಪ್ರಾರಂಭದಿಂದ ಅಭಿವ್ಯಕ್ತಪಡಿಸಿದ ಕ್ರಮಕ್ಕೆ ಅವರ ಸಮಕಾಲೀನ ಕವಿಗಳು ಅಭಿವ್ಯಕ್ತಿಯ ಕ್ರಮಕ್ಕೆ ವ್ಯತ್ಯಾಸವಿದೆ. ಅಷ್ಟೇ ಅಲ್ಲದೆ ಇವರ ಕ್ರಮ ಬೇರೆಯದೆ ಆದ ಒಂದು ಹದವನ್ನು ಪಡೆದುಕೊಂಡಿದಿಯೆಂದಿದ್ದಾರೆ. ಅಂದರೆ ‘ಚಲನೆ’, ಧ್ಯಾನ’ ಮತ್ತು ತೀವ್ರತೆಗಳು ಬಂಜಗೆರೆ ಕಾವ್ಯದ ಮೂಲ ನೆಲೆಗಳು. ಈ ಮೂರು ನೆಲೆಗಳು ಒಟ್ಟುಗೂಡಿದ ಸಂಕೀರ್ಣ ವ್ಯಕ್ತಿತ್ವವು ಅವರ ಕವಿತೆಯ ಶಕ್ತಿ. ಅಂದರೆ ಸಾಹಿತ್ಯದಲ್ಲಿ ವರ್ತಮಾನದ ತಲ್ಲಣ, ಕ್ರಾಂತಿಕಾರಿ ವಿಚಾರಗಳಿಗೆ ಪೂರಕವಾದ ಸಿಟ್ಟು, ಆಕ್ರೋಶ, ದ್ವೇಷ, ಅಸೂಯೆ ಇವೆಲ್ಲವುಗಳು ಯಾರು ಸಹಿಸಿಕೊಂಡು ಬಂದಿರುತ್ತಾರೋ, ಆ ನೋವಿನ ವಿರುದ್ಧ ಹೋರಾಟ ನಡೆಸುವುದು ತಪ್ಪೇನಲ್ಲ ಎಂಬ ಮಾತು ಒಂದು ಕಡೆ ಇಟ್ಟು ನೋಡಬೇಕಾಗುತ್ತದೆ. ಇಲ್ಲಿ ಸೂಕ್ಷ್ಮ ಅಂತರಂಗದ ಕುದಿತ ಅಂತರ್‌ಮುಖತೆ, ನೇರನುಡಿ ಇವೆಲ್ಲವುಗಳು ಅಭಿವ್ಯಕ್ತಗೊಂಡ ವಿಧಾನದ ರೀತಿ ಬೇರೆಯೆನಿಸುವುದಕ್ಕೆ ಮೂಲ ಕಾರಣವಾಗಿದೆ.

ಕಾವ್ಯ ವಾಸ್ತವಿಕತೆ ಮತ್ತು ಭ್ರಮಕತೆಗಳ ಮಿಲನವಾದುದರಿಂದ, ಇತಿಹಾಸವನ್ನು ಇದರ ನಡುವೆ ಕಲ್ಪಿಸುವ ರೀತಿ ಅನನ್ಯವಾದುದೇ ಸರಿ. ಇಷ್ಟಾದರೂ ಕಾವ್ಯ ಹೇಗೆ ತತ್ವಜ್ಞಾನವನ್ನು ಗರ್ಭಿಕರಿಸಿಕೊಂಡು ತತ್ವಶಾಸ್ತ್ರವನ್ನು ತನ್ನಲ್ಲಿ ಕಟ್ಟಿಕೊಳ್ಳುತ್ತದೆ. “ಕಾವ್ಯ ಇತಿಹಾಸಕ್ಕಿಂತ ಹೆಚ್ಚು ತಾತ್ವಿಕವಾದುದೂ, ಗಂಭಿರವಾದುದೂ ಆಗಿರುತ್ತದೆ.” ಎಂದು ಹೇಳಿದ ಅರಿಸ್ಟಾಟಲ್ ಕಾವ್ಯ ಕೆಲಸ ಮಾಡುವುದು ಸಾರ್ವತ್ರಿಕ ಪರಿಗಣನೆಯಲ್ಲಿ ಲೋಕದ ವಿಷಯಗಳನ್ನು ಪ್ರತಿನಿಧಿತ್ವದ ನೆಲೆಯಲ್ಲಿ ನೋಡುವ ಕವಿ, ಅವುಗಳ ಪೂರ್ಣ ಮಾದರಿಗಳನ್ನು ನಮ್ಮ ಮುಂದೆ ಇಡಲು ಪ್ರಯತ್ನಿಸುತ್ತಾನೆ. ಕವಿಯೂ ವಿಶ್ವದೃಷ್ಟಿಯ ನೆಲೆಯಲ್ಲಿ ನಿಂತು ತ್ರಿಕಾಲಗಳನ್ನು ಏಕತೆ ಬೆಸೆಯುವವನು ಮತ್ತು ಕವಿ ವೈಯಕ್ತಿಕತೆಯನ್ನು ಸಾರ್ವತ್ರಿಕಗೊಳಿಸಿ ಕಾವ್ಯ ಮಾಡುವ ಸ್ವಾತಂತ್ರ್ಯವನ್ನು ಪಡೆದಿರುತ್ತಾನೆ.

ನಾವು ಇಲ್ಲಿಯವರೆಗೆ ಅವರ ಸೃಜನಶೀಲ ಪ್ರಕಾರಗಳ ವಾಸ್ತವಿಕತೆಯನ್ನು ಗಮನಿಸಿದ್ದೇವೆ. ಅವರ ಕಾವ್ಯಗಳ ಮೂಲಕ ವೈಶಿಷ್ಟ್ಯಪೂರ್ಣತೆಯನ್ನೂ ಮೆರೆದಿದ್ದಾರೆ. ಅನೇಕ ಅಂಶಗಳ ಹಿನ್ನೆಲೆಯನ್ನು ಇಟ್ಟುಕೊಂಡು ಕವಿತೆಗಳನ್ನು ರಚಿಸಿದ್ದಾರೆ. ಸಾಮಾಜಿಕ ಚಿತ್ರಣ, ದಲಿತ ಸಂವೇದನೆ, ಇತಿಹಾಸ, ಬಂಡಾಯ ಪ್ರಜ್ಞೆ, ರಾಜಕೀಯ ಚಿಂತನೆ, ಸ್ತ್ರೀಪರ ಚಿಂತನೆ, ವರ್ತಮಾನದ ತಲ್ಲಣ, ಅದಮ್ಯಜೀವನ ಪ್ರೀತಿ, ಚರಿತ್ರೆ ಮರುಚಲನೆ, ಪರಿಸರ, ಭಾಷೆ, ಸಂಸ್ಕೃತಿ, ವಸಹಾತುಶಾಹಿ, ಆರ್ಥಿಕ ಚಿಂತನೆ ಅನೇಕ ನೆಲೆಯಲ್ಲಿ ತಮ್ಮ ಒಡಲಿನ ಪ್ರತಿಮೆಗಳಿಗೆ ಜೀವ ಕೊಡುವ ಪ್ರಯತ್ನವನ್ನು ಮಾಡುವುದರ ಮೂಲಕ ಕನ್ನಡ ಕಾವ್ಯಕ್ಕೆ ಮಹತ್ವದ ಕೊಡುಗೆ ಬಂಜಗೆರೆಯವರು ನೀಡಿದ್ದಾರೆ. ಡಾ.ಕೆ.ವೈ ನಾರಾಯಣಸ್ವಾಮಿ ಅವರು ಹೇಳಿದ ಹಾಗೆ ಒಂದು ಪರ್ಯಾಯ ಮಾದರಿಯನ್ನು ಅನುಸರಿಸುವ ಜೆ.ಪಿ.ಯವರ ಕಾವ್ಯ ಕನ್ನಡ ನಾಡಿನ ಸಾಂಸ್ಕೃತಿಕವಾದ, ರಾಜಕೀಯವಾದ, ಮತ್ತು ಸಾಮಾಜಿಕವಾದ ಪರ್ಯಾಯ ಚರಿತ್ರೆಯೊಂದನ್ನು ಕಟ್ಟಿಕೊಡುತ್ತದೆ. ಅವರ ನೋವಿಗೆ ಹತ್ತಿರದ ಧ್ವನಿಯನ್ನು ಕೊಡುವುದರ ಮೂಲಕ ಕಾವ್ಯದ ಮಹತ್ವ ತಿಳಿಯುತ್ತದೆ.

**ಪರಾಮರ್ಶನ ಗ್ರಂಥಗಳು:**

1. ನಾಗೇಂದ್ರಪ್ಪ ಎಸ್. ಮೈಲಾರಿ (2018). ಬಂಜಗೆರೆ ಜಯಪ್ರಕಾಶರವರ ಕಾವ್ಯ ವಿಮರ್ಶೆ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ. ಕಲಬುರಗಿ.
2. ಚಂಪ (ಸಂ). (ಸೆಪ್ಟೆಂಬರ್ ಅಕ್ಟೋಬರ್ 2006) ಸಂಕ್ರಮಣ. ಸಂಕ್ರಮಣ ಪ್ರಕಾಶನ. ಬೆಂಗಳೂರು.
3. ಶೇಷಗಿರಿರಾವ್ ಎಲ್. ಎಸ್. (1999). ಹೊಸಗನ್ನಡ ಸಾಹಿತ್ಯ ಚರಿತ್ರೆ. ಅಂಕಿತಾ ಪ್ರಕಾಶನ. ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.